ಬಡ ನೇಕಾರರಿಗೆ ಕಚ್ಚಾ ಮಾಲು ಪೂರೈಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 368(247)

**ಸದಸ್ಯರ ಹೆಸರು: ಶ್ರೀ ಬೆಳ್ಳಿಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)**

**ಉತ್ತರಿಸುವ ಸಚಿವರು : ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು)**

## ಪ್ರಶ್ನೆ

1. ರಾಜ್ಯದ ಬಡ ನೇಕಾರರಿಗೆ ನಿರಂತರವಾಗಿ ಉದ್ಯೋಗ ನಿರ್ವಹಿಸಲು ಕಚ್ಚಾ ನೂಲನ್ನು ಪೂರೈಕೆ ಮಾಡುವ ವಿಚಾರದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

2. ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು? ನೇಕಾರರಿಗೆ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳಾವುವು?

## ಉತ್ತರ

1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಬರುವ ಬಡ ನೇಕಾರರಿಗೆ ನಿರಂತರವಾಗಿ ನೂಲನ್ನು ಪೂರೈಸಲು ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ : ಹಮ್ಮಿಕೊಳ್ಳಲಾಗುತ್ತಿದೆ.

1. ವಿದ್ಯಾ ವಿಕಾಸ ಯೋಜನೆಯಡಿ ಶಾಲಾ ಮಕ್ಕಳಿಗೆ ಬೇಕಾಗುವ ಸಮವಸ್ತ್ರಗಳನ್ನು ನಿಗಮದಿಂದಲೇ ಖರೀದಿಸಬೇಕೆಂದು ಹಾಗೂ ಈ ಯೋಜನೆಯನ್ನು ಪ್ರತಿ ವರ್ಷವೂ ಮುಂದುವರೆಸಲಾಗುತ್ತಿದೆ.

2. ಅಗ್ಗದ ದರದ ಸೀರೆ ಪಂಚೆ ಯೋಜನೆಯಡಿ ಬೇಕಾಗುವ ಎಲ್ಲಾ ಸೀರೆ ಮತ್ತು ಪಂಚೆಗಳ ಬೇಡಿಕೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದಲೇ ಖರೀದಿಸಲಾಗುತ್ತಿದೆ. ಈ ಯೋಜನೆಯನ್ನು ಪ್ರತಿವರ್ಷವೂ ಮುಂದುವರಿಸಲಾಗುತ್ತಿದೆ.

3. ಸರ್ಕಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳು ತಮ್ಮ ಬಟ್ಟೆ ಅವಶ್ಯಕತೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಖರೀದಿಸುವ ಪ್ರಸ್ತಾಪವು ಪರಿಶೀಲನೆಯಲ್ಲಿದೆ.

2. ರಾಜ್ಯದಲ್ಲಿರುವ ಒಟ್ಟು ಕೈಮಗ್ಗ ನೇಕಾರರ ಸಂಖ್ಯೆ 76.000 ಇದರಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೇಕಾರರ

ಸಂಖ್ಯೆ 17.000 ಸಹಕಾರಿ ವಲಯದಲ್ಲಿ 25.000 ಹಾಗೂ ಉಳಿದ ನೇಕಾರರು ಸ್ವತಂತ್ರವಾಗಿ ಹಾಗೂ ಮಾಲೀಕ ನೇಕಾರರ ಹತ್ತಿರ ಮಗ್ಗಗಳನ್ನು ಇಡೆಸುತ್ತಾರೆ. ನೇಕಾರರಿಗೆ ನಿರಂತರವಾಗಿ ನೂಲು ಪೂರೈಸಲು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳೇನೆಂದರೆ, ಮಿಲ್‌ಗೇಟ್ ಪೈಜ್ ಯೋಜನೆ. ದೀನದಯಾಳ್ ಹತಕರ್ಗ ಪ್ರೋತ್ಸಾಹನ ಯೋಜನೆ, ವಿದ್ಯಾ ವಿಕಾಸ್ ಯೋಜನೆ, ಅಗ್ಗ ದರದ ಸೀರೆ ಮತ್ತು ಪಂಚೆ ವಿತರಣೆ ಯೋಜನೆ. ಇದಲ್ಲದೆ ಈ ಕೆಳಗಿನ ಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಗೂ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಲಿದೆ.

1. ಮಿತವ್ಯಯ ನಿಧಿ ಯೋಜನೆ

2. ಗುಂಪು ವಿಮಾ ಯೋಜನೆ

3. ಆರೋಗ್ಯ ಒತ್ತಿ ಯೋಜನೆ

4. ಕಾರ್ಯಾಗಾರ ಮತ್ತು ವಸತಿ ಯೋಜನೆ.

ನಾಗಮಂಗಲ ಶಿಲ್ಪಕಲಾ ಕೇಂದ್ರದ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 370(655)

**ಸದಸ್ಯರ ಹೆಸರು: ಶ್ರೀ ಚಲುವರಾಯಸ್ವಾಮಿ ಎಸ್.(ನಾಗಮಂಗಲ)**

**ಉತ್ತರಿಸುವ ಸಚಿವರು: ಶ್ರೀ ಎಸ್.ಆರ್.ಕಾಶಪ್ಪನವರ್(ಸಣ್ಣ ಕೈಗಾರಿಕಾ ಸಚಿವರು)**

## ಪ್ರಶ್ನೆ

ಅ) ನಾಗಮಂಗಲವು ಹಿತ್ತಾಳೆ ಹಾಗೂ ತಾಮ್ರದ ಶಿಲ್ಪಕಲಾ ಕೆಲಸಗಳಿಗೆ ಹೆಸರಾಗಿದ್ದು ಈ ಕರಕುಶಲ ಕಲೆಯ ಅಭಿವೃದ್ಧಿ ಹಾಗೂ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಇಲ್ಲಿ ಶಿಲ್ಪಕಲಾ ಅಕಾಡೆಮಿ ಹಾಗೂ ಕಾವೇರಿ ಕಲಕುಶಲ ಅಭಿವೃದ್ಧಿ ನಿಗಮ ಮತಿಯಿಂದ ಎಂದು ಶಿಲ್ಪಕಲಾ ಕೇಂದ್ರವನ್ನು ಹಾಗೂ ಕಲಾಶಾಲೆಯನ್ನು ತೆರೆದು ಕುಶಲ ಕರ್ಮಿಗಳಿಗೆ ಶಿಲ್ಪಿಗಳಿಗೆ ಪ್ರೋತ್ಸಾಹ ಮತ್ತು ತರಬೇತಿ ನೀಡುವಂತೆ ಈ ಕಲೆಯನ್ನು ಪುನರುಜ್ಜೀವನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?